O.S. NO. 264/2023
PW -1 .
Dated 18-09-2025

ಸಾಕ್ಷಿಯನ್ನು ಈ ದಿನ ದಿನಾಂಕ 18-09-2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ 2 ನೇ ಪ್ರತಿವಾದಿ ಪರವಾಗಿ ಶ್ರೀ ಎಸ್ ವಾಯ್ ಪಿ ವಕೀಲರಿಂದಃ

ನಮ್ಮ ಕುಟುಂಬದಲ್ಲಿ ನಮ್ಮ ಅಡ್ಡ ಹೆಸರು ಗಣಾಚಾರಿ ಉರ್ಫ ಒಂಟಿ ಅಂತಾ ಕರೆಯುತ್ತಾರೆ. ನನಗೆ ಶಾಲೆಗೆ ಸೇರಿಸಲು ನನ್ನ ತಂದೆಯವರು ಬಂದಿದ್ದರು. ಆಗ ನನ್ನತಂದೆ ನನ್ನ ಹೆಸರು ಮಂಜುನಾಥ ವೀರಭದ್ರಪ್ಪ ಒಂಟಿ ಅಂತಾ ಬರೆಸಿರುತ್ತಾರೆ. ನಮ್ಮ ಕುಟುಂಬದ ಕೆಲವು ದಾಖಲೆಗಳಲ್ಲಿ ಒಂಟಿ ಮತ್ತು ಗಣಾಚಾರಿ ಅಂತಾ ಇರುತ್ತವೆ. ನನ್ನ ತಾಯಿ ಹೆಸರು ಚಂದ್ರವ್ವ. ನನ್ನ ತಂದೆ ಹೆಸರು ವೀರಭದ್ರಪ್ಪ. ನನ್ನ ತಂದೆಗೆ ನನ್ನ ತಾಯಿ ಮದುವೆ ಹೆಂಡತಿ ಅಂತಾ ತೊರಿಸಲು ಮತ್ತು ನಾನು ಅವರ ಮಗ ಇದ್ದೇನೆ ಎಂದ ತೊರಿಸಲು ರೇಶನ ಕಾರ್ಡ, ಆಧಾರ ಕಾರ್ಡ, ಆಯುಶ್ಮಾನ ಕಾರ್ಡ, ಲೇಬರ ಕಾರ್ಡ, ಗೃಹಲಕ್ಷ್ಮೀ ಯೋಜನೆ ಕಾರ್ಡ ಮತ್ತು ನನ್ನ ತಂದೆ ತಾಯಿಯ ಮದುವೆ ಪೊಟೊಗಳನ್ನು ಹಾಜರು ಪಡಿಸಿರುತ್ತೇನೆ. ನಾನು, ಮತ್ತು ನನ್ನ ತಂದೆ ತಾಯಿ ಕೂಡಿಯೇ ಇರುತ್ತವೆ ಎಂದರೆ ಸರಿ. ದಾವಾ ಆಸ್ತಿ ನಮ್ಮ ಪಿತ್ರಾರ್ಜಿತ ಆಸ್ತಿ ಇರುತ್ತದೆ.

ಪಾಟಿ ಸವಾಲುಃ 1,3 ಮತ್ತು 4 ನೇ ಪ್ರತಿವಾದಿ ಪರ ವಕೀಲರು ಪಾಟಿ ಸವಾಲಿಗೆ ಮದ್ಯಾಹ್ನಕ್ಕೆ ಕಾಲಾವಕಾಶ ಕೊರಿದ್ದು, ಮದ್ಯಾಹ್ನದ 3 ಗಂಟೆಗೆ ಪ್ರಕರಣ ಮುಂದುಡಲಾಯಿತು.

O.S. NO. 264/2023

PW -1 .

Dated 18-09-2025

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.

ಸಾಕ್ಷಿಯನ್ನು ಈ ದಿನ ದಿನಾಂಕ 18-09-2025 ರಂದು ಮದ್ಯಾಹ್ನ 3 ಗಂಟೆಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ 1,3 ಮತ್ತು 4 ನೇ ಪ್ರತಿವಾದಿಗಳ ಪರವಾಗಿ ಶ್ರೀ ಎ ಎಫ ಪಿ ವಕೀಲರಿಂದಃ

2. ನಾನು 8 ನೇ ತರಗತಿವರೆಗೆ ಶಾಲೆ ಕಲಿತಿದ್ದೇನೆ. ಪ್ರಸ್ತುತ ದಾವೆ ನನ್ನ ತಂದೆ ಮತ್ತು ನನ್ನ ಸಹೋದರನ ವಿರುದ್ಧ ಹಾಕಿರುತ್ತೇನೆ. 2 ನೇ ಪ್ರತಿವಾದಿಯನ್ನು ಪ್ರಸ್ತುತ ದಾವೆಯಲ್ಲಿ ಆಸ್ತಿ ಕೊಡಲಿ ಎಂದು ಪಕ್ಷಗಾರಳನ್ನಾಗಿ ಮಾಡಿರುತ್ತೇನೆ. ನಾನು ಮತ್ತು 2 ನೇ ಪ್ರತಿವಾದಿ ಸೇರಿ ದಾವೆ ಮಾಡಲು ತೊಂದರೆ ಇತ್ತಾ ಎಂದರೆ ನಾನೇ ಸ್ವತ ಹಾಕಿದ್ದೇನೆ. ನಾನು ಮತ್ತು ನನ್ನ ತಾಯಿಯೊಂದಿಗೆ ವಿಚಾರ ಮಾಡಿ ಪ್ರಸ್ತುತ ದಾವೆ ಹಾಕಿರುತ್ತೇನೆ. 2 ನೇ ಪ್ರತಿವಾದಿ ಮದುವೆ 1 ನೇ ಪ್ರತಿವಾದಿ ಯೊಂದಿಗೆ ಎಷ್ಟು ವರ್ಷದ ಹಿಂದೆ ಎಲ್ಲಿ ಆಗಿತ್ತು ಎಂದರೆ ವರ್ಷ ಗೊತ್ತಿಲ್ಲ, ನಿಚ್ಚಣಿಕಿ ಯ ಮಡಿವಾಳೇಶ್ವರ ಮಠದಲ್ಲಿ ಆಗಿತ್ತು. ಅವರ ಮದುವೆ ದಿನಾಂಕ, ತಿಂಗಳು, ಇಸ್ವಿ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ 1 ನೇ ಪ್ರತಿವಾದಿ ಯೊಂದಿಗೆ ಮದುವೆ ಆದ ಕುರಿತು ದಾಖಲೆ ಇದೆಯಾ ಎಂದರೆ ನನ್ನ ತಂದೆ ಬರೆದು ಕೊಟ್ಟ ಹಕ್ಕು ಬಿಟ್ಟ ಪತ್ರ ಇರುತ್ತದೆ ಎಂದು ನುಡಿದಿರುತ್ತಾರೆ. 2 ನೇ ಪ್ರತಿವಾದಿ ಮದುವೆ 1 ನೇ ಪ್ರತಿವಾದಿಯೊಂದಿಗೆ ಮದುವೆ ಆದ ಬಗ್ಗೆ ದಾಖಲೆ ಹಾಜರು ಮಾಡಿದ್ದೀರಾ ಎಂದರೆ

ಪೊಟೊ ಹಾಜರು ಮಾಡಿದ್ದೇನೆ. ಲಗ್ನ ಪತ್ರಿಕೆ ಹಾಜರು ಮಾಡಿದ್ದೀರಾ ಎಂದರೆ ಆಗ ಲಗ್ನ ಪತ್ರಿಕೆ ಮಾಡುತ್ತಿರಲಿಲ್ಲ ಎಂದು ನುಡಿದಿರುತ್ತಾರೆ. ಅವರ ಮದುವೆ ಆಗಿಲ್ಲದ ಕಾರಣ ಲಗ್ನ ಪತ್ರಿಕೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನಾಗಲಿ ಮತ್ತು ನನ್ನ ತಾಯಿ 2 ನೇ ಪ್ರತಿವಾದಿ ಆಗಲಿ ಸಂಗ್ಳೊಳಿ ಗ್ರಾಮದಲ್ಲಿ ವಾಸವಿದ್ದ ಬಗ್ಗೆ ಏನಾದರೂ ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಇಲ್ಲ. ಸಂಗ್ಳೊಳಿಯಲ್ಲಿ ಎಷ್ಟು ವರ್ಷದ ವರೆಗೆ ವಾಸವಿದ್ದೀರಿ ಎಂದರೆ ನನಗೆ ಗೊತ್ತಿಲ್ಲ ಕಾರಣ ಆಗ ನಾನು ಸಣ್ಣವನು ಇದ್ದೇನು. ಸಂಗ್ಳೊಳಿ ಗ್ರಾಮದಲ್ಲಿ 2 ನೇ ಪ್ರತಿವಾದಿ ಮತ ಚಲಾವಣೆ ಮಾಡಿದ ಬಗ್ಗೆ ದಾಖಲೆ ಇದೆಯಾ ಎಂದರೆ ಇಲ್ಲ. ನಾನು ವೊಟು ಹಾಕುವ ವಯಸ್ಕ ಆದ ನಂತರ ಸಂಗ್ಳೊಳಿಗೆ ಮತ ಚಲಾಯಿಸಲು ಹೊಗಿಲ್ಲ, ಕಿತ್ತೂರನಲ್ಲಿ ಮತ ಚಲಾಯಿಸಿದ್ದೇನೆ. ನಮ್ಮ ರೇಶನ ಕಾರ್ಡ, ಆಧಾರ ಕಾರ್ಡ ಮತ್ತು ವೊಟರ ಕಾರ್ಡಗಳು ನಮ್ಮ ತಾಯಿ ತವರು ವಿಳಾಸದ್ದು ಇರುತ್ತವೆ ಎಂದರೆ ಸರಿ. ನನ್ನ ಶಾಲೆ ಪ್ರವೇಶಾತಿಯನ್ನು 1 ನೇ ಪ್ರತಿವಾದಿ ಅರ್ಜಿ ಕೊಟ್ಟು ಮಾಡಿಸಿರುತ್ತಾನೆ ಎನ್ನುವುದಕ್ಕೆ ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಇಲ್ಲ, ನನ್ನ ತಾಯಿ ಆ ಕುರಿತು ಹೇಳುತ್ತಾರೆ ಎಂದು ನುಡಿದಿರುತ್ತಾರೆ. ನನ್ನ ಮತ್ತು 2 ನೇ ಪ್ರತಿವಾದಿಯ ಅಡ್ಡ ಹೆಸರು ಒಂಟಿ ಅಂತಾ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ, ಗಣಾಚಾರಿ ಸಹ ದಾಖಲಾಗಿರುತ್ತದೆ. ನಮ್ಮ ಅಡ್ಡ ಹೆಸರು ಒಂಟಿ ಅಲಿಯಾಸ ಗಣಾಚಾರಿ ಅಂತಾ ಇರುವ ಸಂಗತಿ ನನಗೆ ನಮ್ಮ ಅಣ್ಣ ಆಸ್ತಿ ಮಾರಾಟ ಮಾಡುತ್ತಿದ್ದಾಗ ನನಗೆ ಗೊತ್ತಾಗಿರುತ್ತದೆ. ಆಗ ನಾನು ಆಸ್ತಿ ಎತ್ತಿ ಹಾಕಬೇಕೆಂದು ನಮ್ಮ ಅಡ್ಡ ಹೆಸರುನ್ನು ಒಂಟಿ ಜೊತೆ ಗಣಾಚಾರಿ ಅಂತಾ ಸಹ ತಿದ್ದುಪಡಿ

ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಒಂಟಿ ಉರ್ಪ ಗಣಾಚಾರಿ ಅಂತಾ ಬಾಂಡ ಮೇಲೆ ಪ್ರಮಾಣ ಪತ್ರ ಬರೆದು ಕೊಟ್ಟು ಮಾಡಿಕೊಂಡಿರುತ್ತೇವೆ. ಸದರಿ ಪ್ರಮಾಣ ಪತ್ರ ಆಧಾರವಾಗಿ ಹಿರಿಯರ ಸಹಿ ಇರುವ ಒಂದು ದಾಖಲೆ ಕೊಟ್ಟಿರುತ್ತೇನೆ. ನಾನು ಹಾಜರುಪಡಿಸಿದ ಪೊಟೊಗಳ ನೆಗಟಿವ ಹಾಜರು ಮಾಡಿದ್ದೀರಾ ಎಂದರೆ ಇಲ್ಲ. ಸದರಿ ಪೊಟೊಗಳನ್ನು ದಾವಾ ಆಸ್ತಿಗಳನ್ನು ಎತ್ತಿ ಹಾಕಬೇಕೆಂದು ಖೊಟ್ಟಿ ಸೃಷ್ಟಿ ಸಿ ಹಾಜರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ನನ್ನ ತಾಯಿಯ್ನು ಮದುವೆ ಆಗಿ ಕರೆದು ಕೊಂಡು ಹೊಗುವಾಗ ಹಕ್ಕು ಬಿಟ್ಟು ಕೊಟ್ಟ ಪತ್ರ ಮಾಡಿಕೊಟ್ಟಿರುತ್ತಾರೆ. ನಾನು ಹೇಳುತ್ತಿರುವಂತೆ ಅವರಿಬ್ಬರ ಮದುವೆ ಆಗಿಲ್ಲ, ಖೊಟ್ಟಿ ದಾಖಲೆಗಳನ್ನು ತಯಾರಿಸಿ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ.

3. ದಾವಾ ಆಸ್ತಿಗಳು ಮೂಲತಃ ನನ್ನ ಅಜ್ಜನ ಹೆಸರಿನಲ್ಲಿ ಇದ್ದವು. ನನ್ನ ಅಜ್ಜನಿಗೆ ಎಷ್ಟು ಜನ ಅಣ್ಣ ತಮ್ಮಂದಿರು ಎಂದರೆ ನನಗೆ ಗೊತ್ತಿಲ್ಲ ನನ್ನ ತಂದೆಗೆ ಗೊತ್ತು. 1 ನೇ ಪ್ರತಿವಾದಿಗೆ ನಾವು 6 ಜನ ಅಣ್ಣ ತಮ್ಮಂದಿರು ಇರುತ್ತಾರೆ. ಅವರ ಹೆಸರು ಮಲ್ಲಪ್ಪ , ನಾಗಪ್ಪ, ಶಿವನಪ್ಪ, ಅಡಿವೆಪ್ಪ ಇರುತ್ತಾರೆ. ನನ್ನ ತಂದೆಗೆ ಅಕ್ಕ ತಂಗಿಯರು ಇದ್ದಾರೊ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯ ಸಹೊದರರ ಹೆಂಡತಿ ಮಕ್ಕಳ ಹೆಸರು ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಗಳು ಯಾವ ಯಾವ ಇಸ್ವಿಯಲ್ಲಿ ಯಾರ ಯಾರ ಹೆಸರಿನಲ್ಲಿ ಇದ್ದವು ಎಂದು ನನಗೆ ಗೊತ್ತಿಲ್ಲ.

4. ವಾದ ಪತ್ರ ಬರೆಯಲು ಮಾಹಿತಿ ನಾನೇ ಕೊಟ್ಟಿರುತ್ತೇನೆ. ದಾವಾ ಆಸ್ತಿಯ ಉತಾರಗಳಲ್ಲಿ ನಮ್ಮ ಹೆಸರುಗಳು ಪ್ರಸ್ತುತ ದಾವೆ ಹಾಕಿದ ನಂತರ ದಾಖಲಾಗಿರುತ್ತದೆ. ದಾವಾ ಹಾಕುವ ಪೂರ್ವದಲ್ಲಿ ದಾವಾ ಉತಾರಗಳಲ್ಲಿ ನಮ್ಮ ಹೆಸರು ಇತ್ತು ಎಂದು ಹೇಳಿ ಬರೆಸಿದ್ದೀರಾ ಎಂದರೆ ನನ್ನ ತಾಯಿ ಹೆಸರು ಇತ್ತು ಅದನ್ನು ಹೇಳಿ ಬರೆಸಿರುತ್ತೇನೆ. ಯಾವ ಆಸ್ತಿ ಉತಾರದಲ್ಲಿ ಮತ್ತು ಎಷ್ಟು ಇಸ್ವಿ ದಾಖಲಿತ್ತು ಎಂದರೆ ಸಾಕ್ಷಿ ಇಸ್ವಿ ಗೊತಿತಲ್ಲ, ಸರ್ವೆ ನಂ. 129 ಮತ್ತು 83 ರಲ್ಲಿಯ ಆಸ್ತಿಗಳ ಉತಾರದಲ್ಲಿ ನನ್ನ ತಾಯಿ ಹೆಸರು ದಾಖಲಿತ್ತು ಎಂದು ನುಡಿದಿರುತ್ತಾರೆ. ದಾವಾ ಹಾಕುವ ಸಮಯದಲ್ಲಿ ದಾವಾ ಆಸ್ತಿ ಉತಾರ ಯಾರ ಹೆಸರಿನಲ್ಲಿ ಇತ್ತು ಎಂದರೆ ನನ್ನ ಅಣ್ಣ 4 ನೇ ಪ್ರತಿವಾದಿ ಹೆಸರಿನಲ್ಲಿ ಇತ್ತು. ಆತನ ಹೆಸರು ಯಾವ ಸಾಲಿನಲ್ಲಿ ದಾವಾ ಆಸ್ತಿ ಉತಾರದಲ್ಲಿ ದಾಖಲಾಯಿತು ಎಂದರೆ ಅವರು ಯಾವ ಮಾಡಿಕೊಂಡಿದ್ದರು ಎಂದು ನನಗೆ ಗೊತ್ತಿರಲಿಲ್ಲ ಎಂದು ನುಡಿದಿರುತ್ತಾರೆ. ಅವರ ಹೆಸರಿನಲ್ಲಿ ದಾವಾ ಆಸ್ತಿ ಮಾಡಿಕೊಂಡಿರುವ ಬಗ್ಗೆ ದಾವಾ ಆಸ್ತಿ ಉತಾರ ತೆಗೆಸಿ ನೊಡಿದಾಗ ಗೊತ್ತಾಗಿರುತ್ತದೆ. ಆತನ ಹೆಸರು ಯಾವ ಸಾಲಿನಲ್ಲಿ ದಾಖಲಯಿತು ಎಂದು ಇಸ್ವಿ ಗೊತ್ತಿಲ್ಲ ಕಾರಣ ಅವರು ನಮ್ಮನ್ನು ಕೇಳದೇ ದಾಖಲಿಸಿಕೊಂಡಿರುತ್ತಾರೆ . ಆತನ ಹೆಸರು 2012 ರಲ್ಲಿ ದಾವಾ ಆಸ್ತಿ ಉತಾರದಲ್ಲಿ ದಾಖಲಾಯಿತು ಎಂದರೆ ನನಗೆ ಗೊತ್ತಿಲ್ಲ. 2012 ರಲ್ಲಿ 4 ನೇ ಪ್ರತಿವಾದಿ ಹೇಸರು ದಾಖಲಿರುವವ್ರುದು ಎಲ್ಲಾದರೂ ಪ್ರಶ್ನಿಸಿದ್ದೀರಾ ಎಂದರೆ ಉತಾರ ತೆಗೆಸಿ ನೊಡಿದಾಗ ಮಾತ್ರ ಗೊತ್ತಾಗಿರುತ್ತದೆ ಎಂದು ನುಡಿದಿರುತ್ತಾರೆ. 4 ನೇ ಪ್ರತಿವಾದಿ ಯಾವ

ಯಾವ ಬ್ಯಾಂಕನಲ್ಲಿ ದಾವಾ ಆಸ್ತಿ ಮೇಲೆ ಸಾಲ ಪಡೆದಿರುತ್ತಾನೆ ಎಂದರೆ ಕೆವಿಜಿ ಬ್ಯಾಂಕನಿಂದ ನನ್ನ ತಂದೆ ಸಾಲ ಪಡೆದಿರುತ್ತಾರೆ ಎಂದು ನುಡಿದಿರುತ್ತಾರೆ. 4 ನೇ ಪ್ರತಿವಾದಿ ದಾವಾ ಆಸ್ತಿ ಸಂಪೂರ್ಣ ಮಾಲಿಕ ಇರುವುದರಿಂದ ಆತ ಒಬ್ಬನೇ ದಾವಾ ಆಸ್ತಿಗಳ ಮೇಲೆ ಸಾಲ ಪಡೆದಿರುತ್ತಾನೆ ಎಂದರೆ ಸರಿಯಲ್ಲ.

5. 1 ನೇ ಪ್ರತಿವಾದಿಗೆ 60 ವರ್ಷ ವಯಸ್ಸು ಆಗಿರಬಹುದು. ಆತ ವಿಕಲಚೇತನ ಇದ್ದಾನೆ ಎಂದರೆ ಸಾಕ್ಷಿ ಸ್ವಲ್ಪ ನಡ ಬಾಗಿರುತ್ತದೆ ಎಂದು ನುಡಿದಿರುತ್ತಾರೆ. ಪ್ರಸ್ತುತ ದಾವೆ ಸಲ್ಲಿಸುವ ಪೂರ್ವ ನಾನು ತಹಶೀಲ್ದಾರ ಬೈಲಹೊಂಗಲ ಮುಂದೆ ದಾವಾ ಆಸ್ತಿಗಳನ್ನು ಬೇರೆ ಯಾರ ಹೆಸರಿಗೆ ಮಾಡಬಾರದು ಅವುಗಳಲ್ಲಿ ನನ್ನ ಪಾಲು ಇದೆ ಅಂತಾ ತಕರಾರು ಅರ್ಜಿ ಕೊಟ್ಟಿದ್ದೆ ಎಂದರೆ ಸರಿ. ಅದೇ ರೀತಿ ಬೈಲಹೊಂಗಲ ಪೊಲಿಸ ಠಾಣೆಯಲ್ಲಿ ಸಹ ದೂರು ಕೊಟ್ಟಿದ್ದೆ ಎಂದರೆ ಸರಿ. ಪೊಲಿಸ ಠಾಣೆಯಲ್ಲಿ ಪೊಲಿಸರು ನನ್ನನ್ನು ಮತ್ತು ಪ್ರತಿವಾದಿಗಳನ್ನು ಕರೆದು ವಿಚಾರಣೆ ಮಾಡಿದರು. ಅಲ್ಲಿ 1 ನೇ ಪ್ರತಿವಾದಿ 2 ನೇ ಪ್ರತಿವಾದಿ ತನ್ನ ಹೆಂಡತಿ ಅಂತಾ ಮತ್ತು ನನ್ನನ್ನು ತನ್ನ ಮಗ ಅಂತಾ ಹೇಳಿರುತ್ತಾನೆ. ಸದರಿ ಪೊಲಿಸ ಠಾಣೆಯಲ್ಲಿ ಯಾರ ಯಾರ ಹೇಳಿಕೆ ಪಡೆದರು ಎಂದರೆ 1, 2 ಮತ್ತು 4 ನೇ ಪ್ರತಿವಾದಿಯರ ಹೇಳಿಕೆಗಳನ್ನು ಪೊಲಿಸರು ಪಡೆದಿರುತ್ತಾರೆ. ಪೊಲಿಸರು ನನ್ನ ತಂದೆಗೆ ಇಬ್ಬರು ಹೆಂಡತಿಯರು ಇರುವ ವಿಷಯ ಕುರಿತು ವಿಚಾರಣೆ ಮಾಡಿರುತ್ತಾರೆ. ಪೊಲಿಸರು ಮೊದಲನೇ ಹೆಂಡತಿ ಮತ್ತು 2 ನೇ ಹೆಂಡತಿ ಯಾರು ಅಂತಾ ವಿಚಾರಣೆ ಮಾಡಿರುತ್ತಾರಾ

ಎಂದರೆ ನನ್ನ ತಾಯಿಯನ್ನು ಕೇಳಿದರು ನನ್ನ ತಾಯಿ ಉತ್ತರ ಕೊಟ್ಟಿರುತ್ತಾಳೆ. ಪೊಲಿಸರು ಬರವಣಿಗೆ ಮಾಡಿಕೊಂಡು ನನ್ನ ತಾಯಿಯ ಸಹಿ ಪಡೆದಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯು 3 ನೇ ಪ್ರತಿವಾದಿ ಶ್ರೀಮತಿ ಸಂಗವ್ವಳನ್ನು ಮಾತ್ರ ಮದುವೆ ಆಗಿರುತ್ತಾನೆ ಎಂದರೆ ಸರಿಯಲ್ಲ.1 ನೇ ಪ್ರತಿವಾದಿ ಯು 2 ನೇ ಪ್ರತಿವಾದಿಯನ್ನು ಯಾವತ್ತು ಮದುವೆ ಆಗಿಯೇ ಇಲ್ಲ ಎಂದರೆ ಸರಿಯಲ್ಲ.

6. ನಾನು ಹಾಜರುಪಡಿಸಿದ ಆಧಾರ ಕಾರ್ಡ , ರೇಶನ ಕಾರ್ಡ, ವೊಟರ ಐಡಿ , ಮತ್ತು ಬ್ಯಾಂಕ ಪಾಸ ಬುಕ 2021 ರ ನಂತರ ಮಾಡಿಸಿರುವ ದಾಖಲೆಗಳು ಇರುತ್ತವೆ ಎಂದರೆ ಸಾಕ್ಷಿ ನನ್ನ ತಾಯಿಗೆ ದಾಖಲೆ ಮಾಡಿಸುವುದು ಗೊತ್ತಾಗುತ್ತಿರಲಿಲ್ಲ ನನಗೆ ಗೊತ್ತಾದ ನಂತರ ಮಾಡಿಸಿದ್ದೇನೆ ಎಂದು ನುಡಿದಿರುತ್ತಾರೆ. ನಾನು, ಮತ್ತು 1 ಹಾಗೂ 2 ನೇ ಪ್ರತಿವಾದಿಗಳು ಕೂಡಿಯೇ ಇರುತ್ತವೇ ಎನ್ನುವುದಕ್ಕೆ ದಾಖಲೆ ಇದೆಯಾ ಎಂದರೆ ಇಲ್ಲ. 1 ನೇ ಪ್ರತಿವಾದಿ ನನ್ನನ್ನು ತನ್ನ ಮಗ ಎಂದು, 2 ನೇ ಪ್ರತಿವಾದಿ ಯನ್ನು ತನ್ನ ಹೆಂಡತಿ ಎಂದು ದಾಖಲಿಸಿರುವ ದಾಖಲೆ ಇದೆಯಾ ಎಂದರೆ ಬಾಂಡ ಬರೆದು ಸಹಿ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ನಾನು ಹಾಜರುಪಡಿಸಿದ ನಿಪಿ - 12 ರಲ್ಲಿ 1 ನೇ ಪ್ರತಿವಾದಿಯ ಹೆಸರಾಗಲಿ ಮತ್ತು ಪೊಟೊ ಇರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳನ್ನು ಎತ್ತಿ ಹಾಕಬೇಕೆಂದು ನಾನು ಮತ್ತು ನನ್ನ ತಾಯಿ ಸೇರಿ ಖೊಟ್ಟಿ ದಾಖಲಾತಿಗಳನ್ನು ತಯಾರಿಸಿಕೊಂಡು ಇದೊಂದು ಸುಳ್ಳು ದಾವೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ನಾನು

O.S. NO. 264/2023

PW -1 .

Dated 18-09-2025

ನನ್ನ ವಾದ ಪತ್ರ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ 1 ನೇ ಪ್ರತಿವಾದಿಗೆ ನನ್ನ ತಾಯಿ ಮೊದಲನೇ ಹೆಂಡತಿ ಮತ್ತು 3 ನೇ ಪ್ರತಿವಾದಿ ಎರಡನೇ ಹೆಂಡತಿ ಅಂತಾ ಸುಳ್ಳು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಯಾವ ಆಧಾರದ ಮೇಲೆ 2 ನೇ ಪ್ರತಿವಾದಿಯು 1 ನೇಪ್ರತಿವಾದಿಯ ಮೊದಲನೆ ಹೆಂಡತಿ ಅಂತಾ ಬರೆಸಿರುತಾತರೆ ಎಂದರೆ ನನ್ನ ತಾಯಿ ಹೇಳಿ ಬರೆಸಿರುತ್ತಾರೆ. 1 ನೇ ಹೆಂಡತಿ ಮತ್ತು 1 ನೇ ಹೆಂಡತಿ ಮಗ ಅಂತಾ ಹೇಳಿ ಬರೆಸಿದರೆ ಮಾತ್ರ ಪಾಲು ಸಿಗುತ್ತದೆ ಅಂತಾ ನನ್ನ ತಾಯಿ ಮೊದಲನೇ ಹೆಂಡತಿ ಅಂತಾ ಸುಳ್ಳು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಆಸ್ತಿಯಲ್ಲಿ ಪಾಲು ಪಡೆಯಬೇಕೆಂಬ ದುರುದ್ದೇಶದಿಂದ ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ – ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು

ಬೈಲಹೊಂಗಲ.